**ದಿ:06.09.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು:-**ವಾದಿ ಪರ ಶ್ರೀ**. T.H.V.,**ವಕೀಲರಿಂದ**:-**

ನನ್ನ ಪ್ರಸ್ತುತ ದಾವಣಗೆರೆಯಲ್ಲಿ ವಿಳಾಸವಿರುತ್ತೇನೆ . ಪ್ರತಿವಾದಿ 1(ಎ)ರವರು ಪ್ರಸ್ತುತ ಮುಗ್ಗಿದರಾಗಿಹಳ್ಳಿ ಗ್ರಾಮದಲ್ಲಿ ವಾಸವಿರುತ್ತಾರೆ . ನನ್ನ ತಾಯಿ ಪ್ರತಿವಾದಿ 1(ಎ)ರವರು ವಾಸವಿರುವ ಮನೆಯು ಅವರ ಹೆಸರಿನಲ್ಲಿ ಇರುತ್ತದೆ . ಸದರಿ ಮನೆಯು ನನ್ನ ತಾಯಿ ಹೆಸರಿನಲ್ಲಿ ಇರುವ ಬಗ್ಗೆ ತೋರಿಸಲು ದಾಖಲೆಯನ್ನು ಹಾಜರುಪಡಿಸಿರುತ್ತೇನೆ . ಸಾಕ್ಷಿ ಮುಂದುವರೆಸಿ ನಾನು ಜಿರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತೇನೆ , ಮೂಲ ಪ್ರತಿಯನ್ನು ಹಾಜರುಪಡಿಸಿರುವುದಿಲ್ಲ ಎಂದು ಹೇಳುತ್ತಾರೆ . ಸದರಿ ಮನೆಯ ಖಾತೆ ಅಥವಾ ಇ ಸ್ವತ್ತು ನಮ್ಮ ತಾಯಿಯ ಹೆಸರಿಗೆ ಮಾಡಿಸಿರುವುದಿಲ್ಲ . ನಮ್ಮ ತಾಯಿಯವರು ವಾಸವಿರುವ ಮನೆಯು ಸರ್ವೆ ನಂಬರ್ 32 ರಲ್ಲಿ ಸರ್ಕಾರಿ ಜಮೀನು ಇದ್ದು , ಸರ್ಕಾರವು ನಮ್ಮ ತಾಯಿಯವರಿಗೆ ಮಂಜೂರು ಮಾಡಿರುತ್ತಾರೆ . ನಮ್ಮ ತಾಯಿ ವಾಸವಿರುವ ಮನೆಯು ಸರ್ವೆ 32 ರಲ್ಲಿ ಇರುವುದಿಲ್ಲ , ದಾವಾ ಆಸ್ತಿಯ ಸರ್ವೆ ನಂಬರ್ 80 ರಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ವಾದಿಯು ಈ ದಾವೆ ಸಲ್ಲಿಸುವ ಪೂರ್ವದಲ್ಲಿ ಅಳತೆ ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ದಾವಣಗೆರೆಯಲ್ಲಿ ವಾಸವಿರುವ ಕಾರಣ ನನಗೆ ವಾದಿಯು ಅಳತೆ ಮಾಡಿಸಿರುವ ವಿಚಾರ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ವಾದಿಯು ಅಳತೆ ಮಾಡಿಸಿದಾಗ ನನ್ನ ತಂದೆ ತಾಯಿಯ ದಾವಾ ಆಸ್ತಿಯಲ್ಲಿ ಸುಮಾರು ಮುಕ್ಕಾಲು ಗುಂಟೆಯಷ್ಟು ಒತ್ತುವರಿ ಮಾಡಿ ಮನೆ ಕಟ್ಟಿರುವ ಬಗ್ಗೆ ಸರ್ವೆ ಇಲಾಖೆಯವರು ವರದಿ ನೀಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವರದಿ ಬಂದ ನಂತರ ವಾದಿಯು ದಾವಾ ಆಸ್ತಿಯಲ್ಲಿ ಒತ್ತುವರಿ ಅಗಿದ್ದನ್ನು ತಮಗೆ ಬಿಟ್ಟುಕೊಡಲು ಕೇಳಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ನಾವು ಕಟ್ಟಿರುವ ಮನೆ ದಾವಾ ಆಸ್ತಿಯಲ್ಲಿ ಇರುವುದಿಲ್ಲ ಎಂದು ಹೇಳುತ್ತಾರೆ. ಈಗ ನ್ಯಾಯಾಲಯದ ಮುಖಾಂತರ ದಾವಾ ಆಸ್ತಿಯನ್ನು ಅಳತೆ ಮಾಡಿಸಿ ಒತ್ತುವರಿ ಆದ ಬಗ್ಗೆ ವರದಿ ಪಡೆಯಲು ನನ್ನ ತಕರಾರು ಇರುವುದಿಲ್ಲ .

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ,

ಆಲಿಸಿ ಸಮಯ ನೀಡಲಾಯಿತು )

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು, ಜಗಳೂರು